ಕೊಡಗು ವಿಶ್ವವಿದ್ಯಾಲಯ
KODAGU UNIVERSITY

---

No: KU/REG/DEV/2023-24/342

ಕುಲಸಚಿವರ ಕಛೇರಿ
ಜ್ಞಾನಕಾವೇರಿ ಆವರಣ
ಚಿಕ್ಕಅಳುವಾರ – 571232
E-Mail– reg-admkuk@karnataka.gov.in
Date: 14.02.2024

## ಪಿ.ಜಿ. ಡಿಪ್ಲೊಮಾ ಇನ್ ಕೊಡವ ಕಾರ್ಯಕ್ರಮಕ್ಕೆ ಅತಿಥಿ ಉಪನ್ಯಾಸಕರ ಆಯ್ಕೆಗಾಗಿ ಪ್ರಕಟಣೆ

ಕೊಡಗು ವಿಶ್ವವಿದ್ಯಾಲಯ ಜ್ಞಾನಕಾವೇರಿ ಆವರಣ, ಚಿಕ್ಕ ಅಳುವಾರ ಇಲ್ಲಿನ 2023–24ನೇ ಶೈಕ್ಷಣಿಕ ಸಾಲಿಗೆ ಪಿ.ಜಿ. ಡಿಪ್ಲೋಮಾ ಇನ್ ಕೊಡವ ಕಾರ್ಯಕ್ರಮಕ್ಕೆ ಅತಿಥಿ ಉಪನ್ಯಾಸಕರ ಅವಶ್ಯಕತೆಯಿದ್ದು, ಅಂಗೀಕೃತ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ 55% ಅಂಕಗಳನ್ನು ಹೊಂದಿರುವ (ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳಿಗೆ ಕನಿಷ್ಠ 50% ಅಂಕಗಳೊಂದಿಗೆ) ಹಾಗೂ ಕೊಡವ ಭಾಷಾ ಪ್ರಾವಿಣ್ಯತೆ ಹೊಂದಿರುವ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ದಿನಾಂಕ 19.02.2024ರೊಳಗೆ ಈ ಕೆಳಗೆ ಸೂಚಿಸಿರುವ ದಾಖಲೆಗಳೊಂದಿಗೆ ಅರ್ಜಿಯನ್ನು ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ **www.kuk.karnataka.gov.in** ನಲ್ಲಿ ಪಡೆದುಕೊಳ್ಳುವುದು

- ಎಸ್ಎಸ್ಎಲ್ಸಿ & ಪಿಯುಸಿ ಅಂಕಪಟ್ಟಿ
- ಸ್ನಾತಕ & ಸ್ನಾತಕೋತ್ತರ ಅಂಕಪಟ್ಟಿಗಳು ಹಾಗೂ ಪದವಿ ಪ್ರಮಾಣ ಪತ್ರಗಳು
- ಯುಜಿಸಿ/ ಎನ್.ಇ.ಟಿ/ಎಸ್.ಎಲ್.ಇ.ಟಿ ಉತ್ತೀರ್ಣತೆ/ಎಂ.ಫಿಲ್/ಪಿ.ಹೆಚ್.ಡಿ ಪದವಿ ಪ್ರಮಾಣ ಪತ್ರಗಳು
- ಸಂಶೋಧನಾ ಪತ್ರಿಕೆಗಳು (SCOPUS/WS/UGC-CARE LIST)
- ಜಾತಿ ಪ್ರಮಾಣ ಪತ್ರ
- ಸೇವಾ ಪ್ರಮಾಣ ಪತ್ರ (Service Certificate)
- ಇತರೆ ಪ್ರಶಸ್ತಿ ಪ್ರಮಾಣ ಪತ್ರಗಳು (ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ)

### KODAGU UNIVERSITY CAMPUS

| Sl. No. | Dept./ Programme |
|---|---|
| 1 | P.G. Diploma in Kodava |

## ಅಭ್ಯರ್ಥಿಗಳ ಗಮನಕ್ಕೆ

1. ಕೊನೆಯ ದಿನಾಂಕದ ನಂತರ ಸ್ವೀಕೃತವಾದ ಮತ್ತು ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
2. ಯುಜಿಸಿ/ ಎನ್.ಇ.ಟಿ/ಎಸ್.ಎಲ್.ಇ.ಟಿ ಉತ್ತೀರ್ಣತೆ/ಎಂ.ಫಿಲ್/ಪಿ.ಹೆಚ್.ಡಿ ಪದವಿ ಪಡೆದವರಿಗೆ ಆದ್ಯತೆ ನೀಡಲಾಗುವುದು
3. ಅಭ್ಯರ್ಥಿಗಳು ತಮ್ಮ ಇ-ಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಯನ್ನು ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.
4. ಆಯ್ಕೆಯಾದ ಅಭ್ಯರ್ಥಿಗಳು ವಿಶ್ವವಿದ್ಯಾಲಯ ಆವರಣ ಮತ್ತು ಘಟಕ ಕಾಲೇಜುಗಳಲ್ಲಿ ಸೇವೆ ಸಲ್ಲಿಸಲು ಸಿದ್ಧರಿರಬೇಕು
5. **ಅವಶ್ಯಕತೆಯಿದ್ದಲ್ಲಿ ಮಾತ್ರ ಅತಿಥಿ ಉಪನ್ಯಾಸಕರ ಆಯ್ಕೆ ಮಾಡುವ ಅಧಿಕಾರವನ್ನು ವಿಶ್ವವಿದ್ಯಾಲಯ ಕಾಯ್ದಿರಿಸಿದೆ.**
6. **ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದ, ವಿಶ್ವವಿದ್ಯಾಲಯದ ನಿರ್ಣಯವೇ ಅಂತಿಮವಾಗಿದೆ.**
7. ಕರ್ನಾಟಕ ಸರ್ಕಾರದ ಮೀಸಲಾತಿಗನುಸಾರವಾಗಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು.
8. ಸಂದರ್ಶನದ ದಿನಾಂಕವನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ **www.kuk.karnataka.gov.in** ನಲ್ಲಿ ಪ್ರಕಟಿಸಲಾಗುವುದು ಹಾಗೂ ಅಭ್ಯರ್ಥಿಗಳು ಎಲ್ಲಾ ಮೂಲ ದಾಖಲೆಗಳೊಂದಿಗೆ ಸಂದರ್ಶನಕ್ಕೆ ಹಾಜರಾಗುವುದು.
9. ಅಭ್ಯರ್ಥಿಗಳು ಅರ್ಜಿಗಳನ್ನು **ಕುಲಸಚಿವರ ಕಛೇರಿ, ಕೊಡಗು ವಿಶ್ವವಿದ್ಯಾಲಯ, ಜ್ಞಾನಕಾವೇರಿ ಆವರಣ, ಚಿಕ್ಕ-ಅಳುವಾರ, ತೊರೆನೂರು ಅಂಚೆ, ಕುಶಾಲನಗರ ತಾಲ್ಲೂಕ್, ಕೊಡಗು ಜಿಲ್ಲೆ – 571232** ವಿಳಾಸಕ್ಕೆ ಸಲ್ಲಿಸುವುದು.
10. ಪ್ರಸ್ತುತ ಯಾವುದೇ ಕಾಲೇಜು/ವಿಶ್ವವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
11. ಈಗಾಗಲೇ ಬೋಧನೆ ಮಾಡುತ್ತಿರುವ ಉಪನ್ಯಾಸಕರಿಗೆ ಮೊದಲ ಆದ್ಯತೆ ನೀಡಲಾಗುವುದು.

**ಕುಲಸಚಿವರು**

ಕುಲಸಚಿವರು
ಕೊಡಗು ವಿಶ್ವವಿದ್ಯಾಲಯ
ಚಿಕ್ಕ ಅಳುವಾರ-571232
ಕುಶಾಲನಗರ ತಾ, ಕೊಡಗು, ಕರ್ನಾಟಕ

ಪ್ರತಿ:
1. ಕುಲಸಚಿವರು (ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಕೊಡಗು ವಿಶ್ವವಿದ್ಯಾಲಯ, ಕೊಡಗು
2. ಎಲ್ಲಾ ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರು/ಸಂಯೋಜಕರು, ಕೊಡಗು ವಿಶ್ವವಿದ್ಯಾಲಯ, ಕೊಡಗು
3. ಪ್ರಾಂಶುಪಾಲರು, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ
4. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ಕೊಡಗು ವಿಶ್ವವಿದ್ಯಾಲಯ, ಕೊಡಗು
5. ಕಛೇರಿ ಪ್ರತಿ